ಅಸಲು ದಾವಾ ಸಂಖ್ಯೆ . 276/2014

ಡಿ .ಡಬ್ಲ್ಯೂ- 1
ದಿಃ 06-03-2021
ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀ ಹೆಚ್ ಜಿ ಎಸ್ ವಕೀಲರಿಂದ ಃ-

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ವಾದಿ ಮತ್ತು ಅವರ ಗಂಡ ಪರಿಚಯಸ್ಥರು . ವಾದಿಯು ದಾವಾ ಆಸ್ತಿಯ ಮಾಲೀಕರು ಎಂದರೆ ಸರಿಯಲ್ಲ. ನನಗೆ ವಾದಿಯು ಹೂಡಿರುವ ದಾವಾದ ಬಗ್ಗೆ ಮಾಹಿತಿ ಇರುತ್ತದೆ. ಯಾವ ಪರಿಹಾರ ಕೋರಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಜಾಗ ಕಬಳಿಸುವ ಉದ್ದೇಶದಿಂದ ದಾವಾ ಹೂಡಿರುತ್ತಾರೆಂದರು . ದಾವಾ ಆಸ್ತಿ ಸಂಖ್ಯೆ ನನಗೆ ಗೊತ್ತಿರುವುದಿಲ್ಲ.

ದಾವಾ ಆಸ್ತಿ ಸಂಖ್ಯೆಯು 206 ಅದರ ಉದ್ದ ಅಳತೆ , ಪೂರ್ವ ಪಶ್ಚಿಮ 27 ಗಜ , ಉತ್ತರ ದಕ್ಷಿಣ 20 ಗಜ ಅದರಲ್ಲಿ ವಾದಿಯು 17 ½ x 78 ರಲ್ಲಿ ಆರ್ ಸಿಸಿ ಮನೆ ಕಟ್ಟಿರುತ್ತಾರೆಂದರೆ ಸರಿ . ದಾವಾ ಆಸ್ತಿ ಮೂಲತಃ ಕಾಳಮ್ಮ ಮತ್ತು ಹುಚ್ಚಪ್ಪ ರವರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. 1977 ವರೆಗೂ ಸದರಿ ಹುಚ್ಚಪ್ಪ ರವರು ದಾವಾ ಆಸ್ತಿಯ ಮಾಲೀಕನೆಂದರೆ ಸರಿಯಲ್ಲ. ಹುಚ್ಚಪ್ಪ ರವರ ಮರಣಾನಂತರ ಆತನ ಹೆಂಡತಿ ಕಾಳಮ್ಮ ರವರು ಹೆಚ್. ಪಿ ರಂಗಪ್ಪ ಬಿನ್ ಮಹದೇವಪ್ಪ ರವರಿಗೆ ಬರೆದುಕೊಟ್ಟಿರುತ್ತಾರೆ ಎಂದು ಸೂಚಿಸಿದರೆ ನನಗೆ ಗೊತ್ತಿಲ್ಲ. 1997 ರಲ್ಲಿ ಸದರಿ ರಂಗಪ್ಪ ರವರು ದಾವಾ ಆಸ್ತಿಯನ್ನು ಹುಚ್ಚಪ್ಪ ಬಿನ್ ವೀರಬಸಪ್ಪ ರವರಿಗೆ ಮಾರಾಟ ಮಾಡಿರುತ್ತಾರೆಂದು ಸೂಚಿಸಿದರೆ ನನಗೆ ಗೊತ್ತಿಲ್ಲ. ಸದರಿ ಕ್ರಯಪತ್ರಗಳು ಹೊನ್ನಾಳಿ ಸಬ್ ರಿಜಿಸ್ಟರ್ ನಲ್ಲಿ ನೋಂದಾಣಿ ಆಗಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ವಾದಿಗೆ ಕ್ರಯಪತ್ರ ಬರೆದ ಕಾಲಕ್ಕೆ ಗಡಿಬಿಡಿ ಯಲ್ಲಿ ಉದ್ದ ಅಳತೆ ತಪ್ಪಾಗಿ ನಮೂದಾಗಿರುತ್ತದೆ. ಎಂದರೆ ನನಗೆ ಗೊತ್ತಿಲ್ಲ. 1977 ಮತ್ತು 1992 ರಲ್ಲಿ ಆದ ಕ್ರಯಪತ್ರಗಳು ಒಂದೇ ಆಸ್ತಿಗೆ ಸಂಬಂಧಿಸಿರುವುದು ಎಂದರೆ ನನಗೆ ಗೊತ್ತಿಲ್ಲ. 1997 ರಿಂದ ಇವತ್ತಿನವರೆಗೂ ವಾದಿಯು ದಾವ ಆಸ್ತಿಯ ಸ್ವಾಧೀನಾನುಭವದಲ್ಲಿ ಇರುತ್ತಾರೆಂದರೆ ಸರಿಯಲ್ಲ. ವಾದಿಯು ದಾವಾ ಆಸ್ತಿ. ಯಲ್ಲಿ ಆರ್ ಸಿಸಿ ಮನೆಯನ್ನು ಕಟ್ಟುಕೊಂಡಿದ್ದಾರೆಂದರೆ ನನಗೆ ಗೊತ್ತಿಲ್ಲ.

ವಾದಿಯ ಅತ್ತೆ ಕಾಳಮ್ಮ ಕೋಂ ಹುಚ್ಚಪ್ಪ ಎಂದರೆ ನನಗೆ ಗೊತ್ತಿಲ್ಲ. ಕಾಳಮ್ಮ ಕೋಂ

ಹುಚ್ಚಪ್ಪ ರವರು 2011 ರಲ್ಲಿ ಪ್ರಕಾಶ್ ಬಿನ್ ಮಹದೇವಪ್ಪ ರವರಿಂದ ಆರ್ ಸಿಸಿ ಮನೆ ಕಟ್ಟಿರುವ ಜಾಗವನ್ನು ಖರೀದಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಅದು ಸಹ ನೋಂದಣಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯ ಖಾತೆಯು ವಾದಿಯ ಹೆಸರಿಗೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆದ ಕಾರಣ ವಾದಿಯ ದಾವಾ ಆಸ್ತಿಯ ಮಾಲೀಕರು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಸಿಸಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ

ಹೊನ್ನಾಳಿ.